# ವಾರ್ತಾ ವಿಶ್ಲೇಷಣೆ

## ತಿಳಿಯುವ ಹಕ್ಕು

**ಇದು** ಮಾಹಿತಿಯ ಯುಗ. ಮಾಹಿತಿ ಕ್ರಾಂತಿ, ಮಾಹಿತಿ ತಂತ್ರ ಜ್ಞಾನ ಇತ್ಯಾದಿಗಳ ಬಗ್ಗೆ ನಾವು ಬಹಳಷ್ಟು ಕೇಳುತ್ತೇವೆ. ಆದರೆ ಭಾರತದಲ್ಲಿ ಅನಕ್ಷರಸ್ಥರು, ಹಳ್ಳಿಗಾಡಿನಲ್ಲಿ ವಾಸಿಸುವವರು ಬಹು ಮುಖ್ಯವಾದ ಮಾಹಿತಿಗಳಿಂದಲೂ ವಂಚಿತರಾಗಿರುವುದು ಶೋಚನೀಯ. ಸಂವಿಧಾನಾತ್ಮಕವಾದ "ತಿಳಿಯುವ ಹಕ್ಕಿ"ನ ತಿಳಿವಳಿಕೆಯೆ ಅವರಿಗಿಲ್ಲ. ಸರ್ಕಾರ ತಮಗೆ ಏನು ಮಾಡುತ್ತಿದೆ, ಏನು ಮಾಡುತ್ತಿಲ್ಲ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿದ ಹಣದಲ್ಲಿ ಎಷ್ಟು ಬಳಕೆಯಾಗುತ್ತದೆ ಮತ್ತು ಎಷ್ಟು ಕಬಳಿಸಲ್ಪಡುತ್ತದೆ ಇತ್ಯಾದಿ ಮಾಹಿತಿಗಳು ಅವರಿಗೆ ದೊರೆಯುವುದೇ ಇಲ್ಲ. ಎಂಥ ಅನ್ಯಾಯವನ್ನೂ ಅಸಹಾಯಕರಾಗಿ ಸಹಿಸಿಕೊಳ್ಳುವುದು ಸ್ವಭಾವವಾಗಿಬಿಟ್ಟಿದೆ. ಪ್ರತಿಭಟಿಸುವ ಪ್ರವೃತ್ತಿಯೂ ಇಲ್ಲ, ಇದ್ದರೂ ಅವರಿಗೆ ಅದರಲ್ಲಿ ಮುಂದಾಳ್ತನ ವಹಿಸುವವರಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಓರ್ವ ಮಹಿಳೆಯ ಸಾಹಸ ಎಲ್ಲರ ಕಣ್ಣು ತೆರೆಯಿಸುವಂತಹುದು. ಆಕೆಯ ಹೆಸರು ಅರುಣಾ ರಾಯ್. ಐ.ಎ.ಎಸ್. ಆಫೀಸರ್ ಆಗಿದ್ದ ಅವರು ತಮ್ಮ ಕೆಲಸಕ್ಕೆ ರಾಜಿನಾಮೆ ಇತ್ತು ಒಂದು ನೂತನ ಚಳುವಳಿಯನ್ನು ಪ್ರಾರಂಭಿಸಿದರು. ರಾಜಾಸ್ಥಾನದ ಅತ್ಯಂತ ಹಿಂದುಳಿದ ಪ್ರದೇಶದ ತಿಲೋನಿಯಾ ಎಂಬ ಹಳ್ಳಿಯಲ್ಲಿ ಗ್ರಾಮಸ್ಥರನ್ನು ಜಾಗೃತಗೊಳಿಸಿ ತಮ್ಮ ತಿಳಿಯುವ ಹಕ್ಕಿಗಾಗಿ ಹೋರಾಡುವಂತೆ ಪ್ರೇರೇಪಿಸಿದರು. ಇದರ ಪರಿಣಾಮವಾಗಿ ಉದ್ಭವಿಸಿದಸಂಘವೇ "ಮಜದೂರ್ ಕಿಸಾನ್ ಶಕ್ತಿ ಸಂಘಟನ" (MKSS). ಇದರ ಮುಖ್ಯ ಉದ್ದೇಶ ಜನರಲ್ಲಿ ತಮ್ಮ ಹಕ್ಕಿನ ಬಗ್ಗೆ ಜಾಗೃತಿ ಮೂಡಿಸುವುದು. ಸರ್ಕಾರ ಎಷ್ಟು ಅಭಿವೃದ್ಧಿ ಕಾರ್ಯ ಕೈಗೊಂಡಿದೆ, ಅದರಲ್ಲಿ ಎಷ್ಟು ಮತ್ತು ಹೇಗೆ ಕಾರ್ಯಗತಗೊಂಡಿದೆ, ಎಷ್ಟು ಹಣ ಪೋಲಾಗಿದೆ ಇತ್ಯಾದಿ ವಿಷಯಗಳೆಲ್ಲ ತಿಳಿಯುವಂತಾಗಬೇಕು. ಒಟ್ಟಿನಲ್ಲಿ ತಮ್ಮ ಹಣವನ್ನು ಸರ್ಕಾರ ಹೇಗೆ ಖರ್ಚು ಮಾಡುತ್ತಿದೆ ಎಂಬುದು ಜನರಿಗೆ ತಿಳಿಯಬೇಕು.

ಈ ಚಳುವಳಿ ತುಂಬ ಪ್ರಬಲವಾಗಿ ಹಳ್ಳಿಯಿಂದ ಹಳ್ಳಿಗೆ, ಪಟ್ಟಣದಿಂದ ಪಟ್ಟಣಕ್ಕೆ ಹರಡತೊಡಗಿತು. ರಾಜ್ಯ ಸರ್ಕಾರ ಇದಕ್ಕೆ ತಲೆಬಾಗಿ ಮೇ ೨೦೦೦ದಲ್ಲಿ "ಮಾಹಿತಿಯ ಹಕ್ಕಿನ ಕಾಯಿದೆ" ಯನ್ನು ಹೊರಡಿಸಿತು. ಬೇರೆ ರಾಜ್ಯಗಳೂ ಇದನ್ನು ಅನುಸರಿಸುತ್ತಿವೆ. ಇದರ ಪರಿಣಾಮವಾಗಿ ಸರ್ಕಾರ ಮತ್ತು ಸಾರ್ವಜನಿಕ ಸಂಸ್ಥೆಗಳು ಹಣವನ್ನು ಸದ್ವಿನಿಯೋಗ ಮಾಡುವ ಅನಿವಾರ್ಯ ಪರಿಸ್ಥಿತಿ ಒದಗುತ್ತಿದೆ. ಅಮೆರಿಕದ ನ್ಯಾಯಾಧೀಶರೊಬ್ಬರು, ಸೂರ್ಯನ ಬೆಳಕು ರೋಗಾಣುಗಳನ್ನು ನಾಶಮಾಡುವಂತೆ ಅರುಣಾ ರಾಯ್ ಭಾರತದ ಪ್ರಜಾಪ್ರಭುತ್ವವನ್ನು ಶುಚಿಗೊಳಿಸುತ್ತಿದ್ದಾರೆ ಎಂದು ಹೇಳಿದರಂತೆ. ಕಳೆದ ವರ್ಷ ಅರುಣಾ ರಾಯ್ ಮತ್ತು MKSSಗೆ ಪ್ರತಿಷ್ಠಿತ ರಾಮೋನ್ ಮೆಗ್ಸಾಯ್ಸೆ ಪ್ರಶಸ್ತಿ ಲಭಿಸಿತು.

❖

## ಶಿವಜ್ಞಾನದಲ್ಲಿ ಜೀವಸೇವೆ

"ವೈದ್ಯರಾಜ ನಮಸ್ತುಭ್ಯಂ ಯಮರಾಜ ಸಹೋದರಃ" ಎಂದು ವೈದ್ಯರನ್ನು ಯಮನಿಗೆ ಹೋಲಿಸುವುದು ವಾಡಿಕೆ. ಕಾಯಿಲೆಯಾದರೆ ವೈದ್ಯರ ಹತ್ತಿರ ಹೋಗುವುದಕ್ಕೇ ಭಯವಾಗುವ ಇಂದಿನ ಅತ್ಯಂತ ಶೋಚನೀಯವಾದ ವೈದ್ಯಕೀಯ ವಲಯದಲ್ಲಿ ಅಮೆರಿಕೆಯ ನಿವಾಸಿಯಾದ ಡಾ.ಶರದ್ ಕುಮಾರ್ ದೀಕ್ಷಿತ್ ಅವರು ಮರುಭೂಮಿಯ ಮಧ್ಯೆ ನಂದನವನದಂತಿರುವವರು.

ಈತ ತುಂಬ ಅಪರೂಪದ ವ್ಯಕ್ತಿ. ೧೯೭೭ರಲ್ಲಿ ಕಾರ್ ಅಪಘಾತದಲ್ಲಿ ಅವರ ದೇಹದ ಬಲಭಾಗಕ್ಕೆ ಲಕ್ವ ಹೊಡೆಯಿತು. ೧೯೮೨ರಲ್ಲಿ ಲ್ಯಾರಿಂಕ್ಸ್ ಕ್ಯಾನ್ಸರ್ ಆಗಿ ಳನೆಯ ಹಂತವನ್ನು ತಲುಪಿತ್ತು. ಆಗ ನಾಲ್ಕು ಬಾರಿ ಶಸ್ತ್ರಚಿಕಿತ್ಸೆಗೆ ಒಳಗಾದರು. ಅವರು ಎರಡೇ ವರ್ಷ ಬದುಕುವುದೆಂದು ವೈದ್ಯರು ಹೇಳಿದ್ದರು.೧೯೮೮ರಲ್ಲಿ ದೀಕ್ಷಿತರಿಗೆ ಮೊದಲ ಹೃದಯಾಘಾತವಾಯಿತು. ೧೯೯೪ರಲ್ಲಿ ತೀವ್ರ ತರದ ಹೃದಯಾಘಾತವಾಯಿತು. ಈ ಎರಡು ಆಘಾತಗಳಿಂದ ಅವರ ಹೃದಯದ ಶೇಕಡ ಎಂಬತ್ತರಷ್ಟು ಮಾಂಸ ನಾಶವಾಗಿದೆಯಂತೆ. ಇಷ್ಟೆಲ್ಲ ದೈಹಿಕ ಕುಂದುಕೊರತೆಗಳಿದ್ದರೂ ಅವರು ಪ್ಲಾಸ್ಟಿಕ್ ಆಪರೇಶನ್ ನಿಲ್ಲಿಸಿಲ್ಲ—ಈಗಲೂ ವ್ಹೀಲ್‌ಚೇರ್‌ನಲ್ಲೇ ಕುಳಿತು ಆಪರೇಶನ್ ಮಾಡುತ್ತಾರಂತೆ.

ದೀಕ್ಷಿತರು ಜಗತ್ತಿನಾದ್ಯಂತ ೫೭,೦೦೦ ಜನರ ದೈಹಿಕ ವಕ್ರತೆಯನ್ನು ನಿವಾರಿಸಿ ಅವರಿಗೆ ಜೀವನದಲ್ಲಿ ಗೆಲುವನ್ನು ತಂದಿರುವರು. ಅವರು ಪ್ರತಿ ವರ್ಷವೂ ಅಕ್ಟೋಬರ್-ಮಾರ್ಚ್ ಅವಧಿಯಲ್ಲಿ ಭಾರತಕ್ಕೆ ಬಂದು ಇಲ್ಲಿ ಬಡವರಿಗಾಗಿ ಉಚಿತ ಶಸ್ತ್ರಚಿಕಿತ್ಸೆ ನಡೆಸುತ್ತಾರೆ. ಹತ್ತು ವರ್ಷಗಳ ಹಿಂದೆ ಒಂದು ವಿಶ್ವಸ್ಥ ಸಂಸ್ಥೆಯನ್ನು ನಿರ್ಮಿಸಿ, ತಮ್ಮ ಜೀವವಿಮೆಯ ಹಣವಾದ ೪೫,೦೦೦ ಡಾಲರ್ ಅದಕ್ಕೆ ಬರುವಂತೆ ಮಾಡಿರುವರು. ತಮ್ಮ ನಂತರವೂ ಈ ಸೇವಾ ಕಾರ್ಯ ಮುಂದುವರಿಯಬೇಕೆಂಬುದು ಅವರ ಉದ್ದೇಶ.

ಡಿಸೆಂಬರ್ ೨೦೦೧ರಲ್ಲಿ ಏಕೈಕ ಅಂತರ ರಾಷ್ಟ್ರೀಯ ಶಿಶು ಅಭಿವೃದ್ಧಿ ಪ್ರಶಸ್ತಿಯನ್ನು ಡಾ.ದೀಕ್ಷಿತರಿಗೆ ನೀಡಿ ೧೦,೦೦೦ ಡಾಲರ್‌ಗಳನ್ನು ಅವರಿಗಿತ್ತು ಸನ್ಮಾನಿಸಲಾಯಿತು. ಜನವರಿ ೨೦೦೨ರಲ್ಲಿ "೨೦೦೧ರ ಭಾರತೀಯ ಅನಿವಾಸಿ" ಪ್ರಶಸ್ತಿಯನ್ನು ಅವರಿಗೆ ನೀಡಲಾಯಿತು. ಐದು ಬಾರಿ ಅವರ ಹೆಸರನ್ನು ನೋಬೆಲ್ ಪ್ರಶಸ್ತಿಗೆ ಸೂಚಿಸಲಾಗಿತ್ತು.

ವೈದ್ಯಕೀಯ ಕ್ಷೇತ್ರದಲ್ಲಿ ಆರಾಧ್ಯ ದೇವತೆಯಂತಿರುವ ಡಾ. ದೀಕ್ಷಿತರು ತುಂಬ ದೈವಭಕ್ತರು ಮತ್ತು ಮಹಾತ್ಮಾ ಗಾಂಧೀಜಿಯವರ ಸೇವಾತತ್ತ್ವದಿಂದ ಸ್ಫೂರ್ತಿಯನ್ನು ಪಡೆದವರು. ತಮ್ಮ ಈ ಅಪೂರ್ವ ಸೇವಾ ಕಾರ್ಯವನ್ನು ಭಗವತ್ಸೇವೆಯ ಮನೋಭಾವದಿಂದ ನೆರವೇರಿಸುತ್ತಿರುವರು. "ಇದೇ ನನ್ನ ಪಾಲಿಗೆ ನಿಜವಾದ ಧರ್ಮ. ನಾವು ಇತರರಲ್ಲಿ ಭಗವತ್ ಚೈತನ್ಯವನ್ನು ಗುರುತಿಸಬೇಕು," ಎನ್ನುತ್ತಾರೆ ಅವರು.

❖